# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 806
2) ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ
3) ಉತ್ತರಿಸಬೇಕಾದ ದಿನಾಂಕ: : 23.07.2024
4) ಉತ್ತರಿಸುವವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು .

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ರೈಲು ನಿಲ್ದಾಣವನ್ನು ರೈಲ್ವೆ ವಲಯವನ್ನಾಗಿ ಮೇಲ್ದರ್ಜೆಗೇರಿಸಬೇಕೆಂದು ಕಲ್ಯಾಣ ಕರ್ನಾಟಕ ಭಾಗದ ಬಹುದಿನಗಳ ಬೇಡಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಲಬುರಗಿ ರೈಲು ನಿಲ್ದಾಣ ಸ್ಥಾಪನೆಯ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿ; ಸರ್ಕಾರದಿಂದ ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ಮನವಿ/ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿದೆಯೇ; (ಮಾಹಿತಿ ನೀಡುವುದು) | 2013-14ನೇ ಸಾಲಿನ ಕೇಂದ್ರ ರೈಲ್ವೆ ಮುಂಗಡ ಪತ್ರದಲ್ಲಿ ಕಲಬುರಗಿ ರೈಲ್ವೆ ವಿಭಾಗವನ್ನು ರಚಿಸುವುದಾಗಿ ಘೋಷಣೆ ಮಾಡಲಾಗಿದೆ. ಅದರ ಅನುಸಾರ ರಾಜ್ಯ ಸರ್ಕಾರವು 37 ಎಕರೆಗಳ ಭೂಮಿಯನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಿದೆ. ಆದರೆ, ನಂತರದಲ್ಲಿ ಈ ಯೋಜನೆಯು ಜಾರಿಗೊಂಡಿರುವುದಿಲ್ಲ.<br>ರಾಜ್ಯ ಸರ್ಕಾರವು ದಿನಾಂಕ:26.08.2020ರ ಪತ್ರ ಸಂಖ್ಯೆ: CM/296/GOI/2020ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪತ್ರದ ಮೂಲಕ ಈ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸುವಂತೆ ರೈಲ್ವೆ ಮಂತ್ರಾಲಯವನ್ನು ಕೋರಲಾಗಿದೆ. ದಿನಾಂಕ: 29.12.2020ರ ಪತ್ರ ಸಂಖ್ಯೆ: 2018/E&R/1920/12ರ ರೈಲ್ವೆ ಸಚಿವರ ಪತ್ರದಲ್ಲಿ ಈ ಯೋಜನೆಯನ್ನು ಆರ್ಥಿಕ ಪರಿಣಾಮಗಳ ದೃಷ್ಟಿಯಿಂದ ಕೈಬಿಡಲಾಗಿದೆ ಎಂದು ತಿಳಿಸಲಾಗಿದೆ. |
| (ಆ) | ಕಲಬುರಗಿ ರೈಲು ನಿಲ್ದಾಣವನ್ನು ರೈಲ್ವೆ ಇಲಾಖೆಗೆ ಕಳೆದ 2 ವರ್ಷಗಳಲ್ಲಿ ಎಷ್ಟು ಪ್ರಮಾಣದ ಆದಾಯ ಸಂಗ್ರಹವಾಗಿದೆ; | ರೈಲ್ವೆ ಇಲಾಖೆಯಿಂದ ಪಡೆದ ಮಾಹಿತಿ ಅನುಸಾರ ಕಲಬುರಗಿ ರೈಲು ನಿಲ್ದಾಣದಿಂದ ರೈಲ್ವೆ ಇಲಾಖೆಯು ಕಳೆದ 2 ವರ್ಷಗಳಲ್ಲಿ ಅಂದರೆ, 2022-23 ನೇ ಸಾಲಿನಲ್ಲಿ ರೂ.91.93 ಲಕ್ಷಗಳು ಮತ್ತು 2023-24 ನೇ ಸಾಲಿನಲ್ಲಿ ರೂ.1.08 ಕೋಟಿ ಹಣವನ್ನು ಸಂಗ್ರಹಿಸಿರುವುದಾಗಿ ತಿಳಿಸಿರುತ್ತದೆ. |
| (ಇ) | ಒಂದು ರೈಲು ನಿಲ್ದಾಣವನ್ನು ರೈಲ್ವೆ ವಲಯವನ್ನಾಗಿ ಮೇಲ್ದರ್ಜೆಗೇರಿಸಲು ಅನುಸರಿಸುವ ನಿಯಮ ಹಾಗೂ ಮಾನದಂಡಗಳೇನು? | ಇದು ರೈಲ್ವೆ ಮಂಡಳಿಯ ನೀತಿ ನಿರೂಪಣೆಯ ವ್ಯಾಪ್ತಿಗೆ ಒಳಪಡುವುದರಿಂದ ಈ ವಿಷಯದ ಕುರಿತಂತೆ ರಾಜ್ಯ ಸರ್ಕಾರದ ಅಭಿಪ್ರಾಯ ಏನೂ ಇರುವುದಿಲ್ಲ. |

ಸಂಖ್ಯೆ: ಮೂಅಇ 140 ರಾರಾಹೆ 2024/ಇ

**(ಎಂ.ಬಿ.ಪಾಟೀಲ)**
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.